KAMD200004902018

Presented on : 09-05-2018
Registered on : 09-05-2018
Decided on : 05-05-2026
Duration : 7 years, 11 months, 27 days

# ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೃಷ್ಣರಾಜಪೇಟೆ.

**ಶ್ರೀ ಸುಧೀರ್, ಬಿ.ಎ. ಎಲ್.ಎಲ್.ಎಂ.,**
**ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಕೃಷ್ಣರಾಜಪೇಟೆ**

ದಿನಾಂಕಃ **05ನೇ ಮೇ ಮಾಹೆಯ 2026**

**ಸಿ.ಸಿ ಸಂಖ್ಯೆಃ 194/2018**

**ಪಿರ್ಯಾದುದಾರರುಃ-** ಆರಕ್ಷಕ ಉಪ ನಿರೀಕ್ಷಕರು,
ಕಿಕ್ಕೇರಿ ಪೊಲೀಸ್ ಠಾಣೆ

**(ಪರಃ ಸಹಾಯಕ ಸರ್ಕಾರಿ ಅಭಿಯೋಜಕರು,**
**ಕೃಷ್ಣರಾಜಪೇಟೆ)**

**- ವಿರುದ್ಧ –**

**ಆರೋಪಿಗಳುಃ-** ಸುರೇಶ ಬಿನ್ ನಾಗೇಗೌಡ
46 ವರ್ಷ, ವಾಸಃ ಕಿಕ್ಕೇರಿ ಹೋಬಳಿ
ಕೃಷ್ಣರಾಜಪೇಟೆ ತಾಲ್ಲೂಕು.

**(ಆರೋಪಿ ಪರವಾಗಿಃ ಶ್ರೀ ಎಸ್.ಜೆ.ಎಂ. ವಕೀಲರು)**

**-ಃ ತೀರ್ಪು ಃ-**

ಕೆ.ಅರ್.ಪೇಟೆ ಅಬಕಾರಿ ಉಪನಿರೀಕ್ಷಕರು, ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 32 ಮತ್ತು 34 ರ ಅನುಸಾರ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಈ ಮೊಕದ್ದಮೆಯಲ್ಲಿ ಅಭಿಯೋಜನೆಯು ನಿವೇದಿಸಿಕೊಂಡಿರುವ ಸಂಗತಿಗಳ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ**

ದಿನಾಂಕಃ01.11.2016 ರಂದು ಸಂಜೆ 6.30 ಗಂಟೆಯ ಸಮಯದಲ್ಲಿ ಕಿಕ್ಕೇರಿ ಪೊಲೀಸ್ ಠಾಣೆ ಸರಹದ್ದಾದ ಮಾದಾಪುರ ಗ್ರಾಮದಲ್ಲಿ ಆರೋಪಿಯಾದ ನೀವು ನಿಮ್ಮ ಮನೆಯ ಪಕ್ಕದಲ್ಲಿ ಸುಮಾರು 8,453/- ರೂ ಬೆಲೆವಾಳುವ 26.410 ಎಂ.ಎಲ್ ನ ಮದ್ಯದ ಬಾಟಲ್, ಟೆಟ್ರಾ ಪ್ಯಾಕೆಟ್, ಟಿನ್‌ಗಳು, ಪ್ಲಾಸ್ಟಿಕ್ ಪೃಚ್‌ಗಳನ್ನು ಅಕ್ರಮವಾಗಿ ಯಾವುದೇ ಪರವಾನಿಗೆ ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದ ಕಾರಣ ಆರೋಪಿಯು ಮೇಲ್ಕಂಡ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 32 ಮತ್ತು 34 ರ ಅನುಸಾರ ಅಪರಾಧವನ್ನೆಸಗಿರುತ್ತಾರೆಂದು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

3. ಪ್ರಕರಣದ ಮೊದಲ ಹಂತದಲ್ಲಿ ಆರೋಪಿ ನ್ಯಾಯಾಲಯದ ಸಮಕ್ಷಮ ಹಾಜರಾಗಿ, ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು, ಪ್ರಸ್ತುತ ಜಾಮೀನಿನ ಮೇಲೆ ಇರುತ್ತಾರೆ. ಆರೋಪಿಗೆ ದಂ.ಪ್ರ.ಸಂ.ಕಲಂ 207 ರ ಅನುಸಾರ ಅಭಿಯೋಜನೆಯು ಸಲ್ಲಿಸಿರುವ ಈ ಮೊಕದ್ದಮೆಯ ಕಾಗದ

ಪತ್ರಗಳ ಪ್ರತಿಗಳನ್ನು ಪೂರೈಸಲಾಯಿತು. ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 32 ಮತ್ತು 34 ರ ಅನುಸಾರ ದೋಷಾರೋಪಣೆಯನ್ನು ಮೇಲ್ಕಾಣಿಸಿದ ಅಪರಾಧಕ್ಕಾಗಿ ಪ್ರಾರೂಪಿಸಿ, ಆರೋಪಿಗೆ ಓದಿ ಹೇಳಲಾಯಿತು. ಆರೋಪಿ ತಮ್ಮ ಮೇಲೆ ಹೊರಿಸಿದ ಆರೋಪಣೆಗಳನ್ನು ಅಲ್ಲಗಳೆದು ಪ್ರಕರಣದ ವಿಚಾರಣೆಯಾಗಬೇಕೆಂದು ಬಯಸಿದ್ದು, ಅವರು ನೀಡಿದ ಉತ್ತರಗಳನ್ನು ನಮೂದಿಸಲಾಯಿತು.

4. ಅಭಿಯೋಜನೆಯು ಈ ಮೊಕದ್ದಮೆಯಲ್ಲಿ ತಾವು ನಿವೇದಿಕೊಂಡಿರುವ ಸಂಗತಿಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಪ್ರಾ.ಸಾ.1 ರಿಂದ 5 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಸದರಿ ಸಾಕ್ಷಿದಾರರ ನುಡಿ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ ಪಿ.1 ರಿಂದ 6 ದಾಖಲಾತಿಗಳ ಸಾಕ್ಷ್ಯವನ್ನು ಹಾಗೂ ಮುದ್ದೆ ಮಾಲು ಸಂಖ್ಯೆ.1 ರಿಂದ 33 ನ್ನು ಹಾಜರುಪಡಿಸಿರುತ್ತಾರೆ. ಅಭಿಯೋಜನೆಯು ತನ್ನ ಪರವಾಗಿನ ಸಾಕ್ಷ್ಯವನ್ನು ಒದಗಿಸಿ ವಿಚಾರಣೆಯನ್ನು ಮುಕ್ತಾಯಗೊಳಿಸಿರುತ್ತದೆ. ಅಭಿಯೋಜನೆಯು ವಿಚಾರಣೆಗೊಳಪಡಿಸಿದ ಸಾಕ್ಷಿದಾರರು ನೀಡಿದ ಸಾಕ್ಷ್ಯದಲ್ಲಿ ಆರೋಪಿಯ ವಿರುದ್ಧವಾಗಿ ಪರಿಗಣಿಸಬಹುದಾದಂತಹ ಸಾಕ್ಷ್ಯವು ಕಂಡು ಬಂದ ಕಾರಣ, ಆರೋಪಿ ಸಾಕ್ಷ್ಯವನ್ನು ಅಲ್ಲಗಳೆದು ತಮ್ಮ ಉತ್ತರಗಳನ್ನು ನೀಡಿರುತ್ತಾರೆ. ಅಲ್ಲದೆ ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯ ಇಲ್ಲವೆಂದ ಕಾರಣ ಮತ್ತು ತಮ್ಮನ್ನು ವಿಚಾರಣೆಗೊಳಪಡಿಸಿಕೊಳ್ಳುವುದಿಲ್ಲವೆಂದು ನಿವೇದಿಸಿಕೊಂಡ ಕಾರಣ ವಿಚಾರಣಾ ಹಂತವನ್ನು ಮುಕ್ತಾಯಗೊಳಿಸಿ, ಉಭಯತ್ರರ ವಾದವನ್ನು ಆಲಿಸುವ ಹಂತಕ್ಕೆ ಮುಂದೂಡಲಾಯಿತು.

5. ಉಭಯತ್ರರ ವಾದ, ಪ್ರತಿವಾದವನ್ನು ಆಲಿಸಲಾಯಿತು.

6. ಈ ಮೇಲೆ ಹೇಳಿದ ಆರೋಪಣೆಯಿಂದ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ.

**: ಅಂಶಗಳು :**

1. ಅಭಿಯೋಜನೆಯು ದಿನಾಂಕಃ 01.11.2016 ರಂದು ಸಂಜೆ 6.30 ಗಂಟೆಯ ಸಮಯದಲ್ಲಿ ಕಿಕ್ಕೇರಿ ಪೊಲೀಸ್ ಠಾಣೆ ಸರಹದ್ದಾದ ಮಾದಾಪುರ ಗ್ರಾಮದಲ್ಲಿ ಆರೋಪಿಯಾದ ನೀವು ನಿಮ್ಮ ಮನೆಯ ಪಕ್ಕದಲ್ಲಿ ಸುಮಾರು 8,453/- ರೂ ಬೆಲೆವಾಳುವ 26.410 ಎಂ.ಎಲ್ ನ ಮದ್ಯದ ಬಾಟಲ್, ಟೆಟ್ರಾ ಪ್ಯಾಕೆಟ್, ಟಿನ್‌ಗಳು, ಪ್ಲಾಸ್ಟಿಕ್ ಪೃಚ್‌ಗಳನ್ನು ಅಕ್ರಮವಾಗಿ ಯಾವುದೇ ಪರವಾನಿಗೆ ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದ ಕಾರಣ ಕರ್ನಾಟಕ ಅಬಕಾರಿ ಕಾಯಿದೆ ಕಲಂ.ಕಲಂ.32 ಮತ್ತು 34 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಸಂಶಯಕ್ಕೆಡೆಮಾಡಿಕೊಡದಂತೆ ರುಜುವಾತುಪಡಿಸುತ್ತದೆಯೆ?

2. ಯಾವ ಆದೇಶ **?**

7. ಈ ನ್ಯಾಯಾಲಯವು ಕಡತದಲ್ಲಿ ಲಭ್ಯವಿರುವ ಪುರಾವೆಗಳನ್ನು ಪ್ರಚಲಿತ ಕಾನೂನಿನ ತತ್ವದೊಂದಿಗೆ ಪರಾಮರ್ಶಿಸಿ, ಕೆಳಕಂಡ ಕಾರಣಗಳನ್ನು ಆದರಿಸಿ, ಮೇಲ್ಕಂಡ ಅಂಶಗಳನ್ನು ಈ ರೀತಿ ಉತ್ತರಿಸುತ್ತದೆ.

| | | |
|---|---|---|
| ಅಂಶ - 1 | ಃ | ನಕಾರಾತ್ಮಕವಾಗಿದೆ. |
| ಅಂಶ - 2 | ಃ | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**:: ಕಾ ರ ಣ ಗ ಳು ::**

8. **ಅಂಶ ನಂ.1 :** ಅಭಿಯೋಜನೆಯು ಆರೋಪಿಗಳ ವಿರುದ್ಧ ಹೊರಿಸಿರುವ ಆಪಾದನೆಗಳನ್ನು ರುಜುವಾತುಪಡಿಸುವ ಸಲುವಾಗಿ ತಮ್ಮ ಪರವಾಗಿ ಒಟ್ಟು 5 ಜನ ಸಾಕ್ಷಿದಾರರನ್ನು ಪ್ರಾ.ಸಾ.1 ರಿಂದ 6 ಎಂದು ಒಟ್ಟು 6 ದಾಖಲೆಗಳನ್ನು ನಿ.ಪಿ.1 ರಿಂದ 6 ಎಂದು ಹಾಗೂ ಮಾದರಿ ತೆಗೆದ ಸ್ವತ್ತುಗಳನ್ನು ಮು.ಮಾ.1 ರಿಂದ 33 ಎಂದು ಗುರುತಿಸಿಕೊಂಡಿರುತ್ತಾರೆ.

9. ಪ್ರಾ.ಸಾ.1 ಮಂಜೇಗೌಡ ಮತ್ತು ಚಾಸಾ.2 ಚಂದ್ರೇಗೌಡ ರವರ ಸಾಕ್ಷ್ಯವನ್ನು ಅವಲೋಕಿಸಲಾಗಿ, ನಮಗೆ ಆರೋಪಿಯ ಪರಿಚಯವಿಲ್ಲ. ನಮ್ಮ ಸಮಕ್ಷಮ ಪೋಲೀಸರು ಆರೋಪಿಯ ಮೇಲೆ ದಾಳಿ ಮಾಡಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನಮಗೆ ಈಗ ತೋರಿಸಿದ ಪಂಚನಾಮೆಯಲ್ಲಿರುವ ಸಹಿ ನಮ್ಮದಾಗಿರುತ್ತದೆ. ಪಂಚನಾಮೆಯನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಮತ್ತು ನಿಪಿ1 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನಮಗೆ ಗೊತ್ತಿಲ್ಲ. ಸದರಿ ಸಹಿಯನ್ನು ನಾವು ಸುಮಾರು ನಾಲ್ಕು ಐದು ವರ್ಷಗಳ ಹಿಂದೆ ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ನಮ್ಮ ಸಹಿಯನ್ನು ಪಡೆಯಲಾಗಿದೆ ಎಂದು ನಮಗೆ ಗೊತ್ತಿಲ್ಲ. ನಮ್ಮ ಸಮಕ್ಷಮ ಪೊಲೀಸರು ಸ್ಥಳ ಪಂಚನಾಮೆಯನ್ನು ಮಾಡಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಾವು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದು. ಅಭಿಯೋಜನೆಯು ಸದರಿ

ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿರುತ್ತಾರೆ.

10. ಪ್ರಾಸಾ.1/ಮಂಜೇಗೌಡ ಮತ್ತು ಪ್ರಾಸಾ.5/ಚಂದ್ರೇಗೌಡ ರವರು ತಮ್ಮ ಪಾಟೀಸವಾಲಿನಲ್ಲಿ ದಿನಾಂಕ 01.01.2016 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಆರೋಪಿ ಸುರೇಶ ತಮ್ಮ ಮನೆಯ ಹತ್ತಿರ ಮದ್ಯದ ಟೆಟ್ರಾ ಪ್ಯಾಕ್ ಟಿನ್ ಮತ್ತು ಪ್ಲಾಸ್ಟಿಕ್ ಪೌಚುಗಳನ್ನು ಮಾರಾಟದ ಉದ್ದೇಶದಿಂದ ದಾಸ್ತಾನು ಮಾಡಿದ್ದಾನೆ ಎಂಬ ಕಾರಣಕ್ಕಾಗಿ ಪೊಲೀಸರು ನಮ್ಮ ಸಮಕ್ಷಮ ದಾಳಿ ಮಾಡಿ ಮದ್ಯವನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ1 ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಹಾಜರಿದ್ದು ನಮ್ಮ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಹೇಳಿಕೆಯನ್ನು ಪೊಲೀಸರಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ2 ಮತ್ತು ನಿಪಿ3 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

11. ಪ್ರಾ.ಸಾ.3 ಸಿದ್ದೇಗೌಡ.ಹೆಚ್.ಎಸ್ ರವರ ಸಾಕ್ಷ್ಯವನ್ನು ಅವಲೋಕಿಸಲಾಗಿ, ನಾನು ಜೂನ್ 2015 ರಿಂದ ಡಿಸೆಂಬರ್ 2016 ರವರೆಗೆ ನಾನು ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕೆಲಸ ನಿರ್ವಹಿಸಿರುತ್ತೇನೆ. ದಿನಾಂಕ 01.11.2016

ಸಂಜೆ 8.15 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿಎಸ್ ಐ ರವರು ನೀಡಿದ ವರದಿಯನ್ನು ಸ್ವೀಕರಿಸಿದ್ದೇನು. ಸದರಿ ವರದಿಯ ಆಧಾರದ ಮೇಲೆ ನಾನು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನು. ವರದಿಯನ್ನು ನಿಪಿ-4 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-5 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಪಿ.ಎಫ್ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ಸಮಕ್ಷಮ ಹಾಜರುಪಡಿಸಿದ ಆರೋಪಿಯ ವಿರುದ್ದ ದಸ್ತಗಿರಿ ಕ್ರಮವನ್ನು ಜರುಗಿಸಿ ನ್ಯಾಯಾಲಯಾಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರಾದ ಮಂಜೇಗೌಡ, ಚಂದ್ರೇಗೌಡ, ರೇವಯ್ಯ, ವಿನೋದ್ ಮತ್ತು ರಜಿತ್ ರವರ ಹೇಳಿಕೆಗಳನ್ನು ಪಡೆದುಕೊಂಡೆನು. ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟೇನು. ಆ ಬಗ್ಗೆ ವರದಿಯನ್ನು ಸ್ವೀಕರಿಸಿದ್ದೇನು. ಸದರಿ ವರದಿಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಪಿಎಸ್ ಐರವರಿಗೆ ಕಡತವನ್ನು ವಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ನಾನು ದಸ್ತಗಿರಿ ಮಾಡಿದ ಆರೋಪಿಯಾಗಿರುತ್ತಾರೆ. ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ನಾನು ನೋಡಿದರೆ

ಗುರುತಿಸುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಇನ್ನಿತರ ಸಲಹಾತ್ಮಕ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

12. ಪ್ರಾಸಾ.4 ವಿನೋದ್ ರವರ ಸಾಕ್ಷ್ಯವನ್ನು ಅವಲೋಕಿಸಲಾಗಿ, ದಿನಾಂಕ 01.11.2016 ರಂದು ನಾನು ಠಾಣೆಯಲ್ಲಿ ಇದ್ದಾಗ ಸಂಜೆ 06.05 ಗಂಟೆ ಸಮಯದಲ್ಲಿ ಚಾಸಾ1 ರವರು ನನಗೆ ಮತ್ತು ಚಾಸಾ4 ರವರಿಗೆ ಮಾದಾಪುರ ಗ್ರಾಮದಲ್ಲಿ ಸುರೇಶ್ ಬಿನ್ ನಾಗೇಗೌಡರವರು ಯಾವುದೇ ಪರವಾನಗಿ ಇಲ್ಲದೆ ಮನೆಯಲ್ಲಿ ಅಕ್ರಮವಾಗಿ ಮದ್ಯಪಾನ ದಾಸ್ತಾನು ಮಾಡಿ ಮಾರಾಟ ಮಾಡುತಿದ್ದಾರೆ ಎಂದು ಬಾತ್ಮಿ ತಿಳಿಸಿರುತ್ತಾರೆ. ನಂತರ ನಾವು ಇಲಾಖಾ ವಾಹನದಲ್ಲಿ ಹೊರಟು ಲಕ್ಷ್ಮೀಪುರ ಗೇಟಿನ ಬಳಿ ನಿಂತಿದ್ದ ಚಾಸಾ2 ಮತ್ತು 3 ರವರಿಗೆ ಬಾತ್ಮಿ ವಿಷಯ ತಿಳಿಸಿ ದಾಳಿ ಕಾಲಕ್ಕೆ ಪಂಚರಾಗಲು ಕೋರಿಕೆ ಮೇರೆಗೆ ಒಪ್ಪಿ ನಮ್ಮೊಡನೆ ಬಂದಿರುತ್ತಾರೆ. ನಂತರ ನಾವು ಬಾತ್ಮಿ ಬಂದ ಸ್ಥಳಕ್ಕೆ ಭೇಟಿ ಕೊಟ್ಟು ನೋಡಲಾಗಿ ಆರೋಪಿ ಮನೆಯ ಮುಂದೆ ಸಾರ್ವಜನಿಕರಿಗೆ ಮಧ್ಯಪಾನ ಮಾರಾಟ ಮಾಡುತ್ತಿರುವುದು ಕಂಡುಬಂದಿತ್ತು. ನಂತರ ಆರೋಪಿಯು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಸಾರ್ವಜನಿಕರು ಓಡಿಹೋಗಿ ತಪ್ಪಿಸಿಕೊಂಡಿರುತ್ತಾರೆ. ನಾವು ಸ್ಥಳದಲ್ಲಿಯೇ ದಾಳಿ ಮಾಡಿ ಆರೋಪಿಯನ್ನು ದಸ್ತಗಿರಿ ಮಾಡಿ ವಿಚಾರಿಸಲಾಗಿ ಆತನ ಹೆಸರು ಸುರೇಶ್ ಬಿನ್ ನಾಗೇಗೌಡ ಎಂದು ತಿಳಿಸಿರುತ್ತಾನೆ. ನಂತರ ವಿಚಾರಿಸಲಾಗಿ ಆತನಿಗೆ ಮದ್ಯಪಾನ ಮಾರಾಟ ಮಾಡಲು ಯಾವುದೇ ಪರವಾನಗಿ ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ನಾವು ಆರೋಪಿ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ನೋಡಲಾಗಿ ಅದರಲ್ಲಿ 500 ಎಂಎಲ್ ನ ಕಿಂಗ್ ಫಿಷರ್

ಸ್ಟ್ರಾಂಗ್ ಬಿಯರ್ 5 ಟಿನ್, 330 ಎಂಎಲ್ ನ ಕಿಂಗ್ ಫಿಷರ್ ಸ್ಟ್ರಾಂಗ್ ಬಿಯರ್ 7 ಟಿನ್, 90 ಎಂಎಲ್ ಬ್ಯಾಗ್ ಪೈಪರ ವಿಸ್ಕಿ 9 ಟೆಟ್ರಾ ಪ್ಯಾಕ್, 180 ಎಂಎಲ್ ಓಲ್ಡ್ ಅಡ್ಮಿರಲ್ ಬ್ರಾಂತಿ 14 ಟೆಟ್ರಾ ಪ್ಯಾಕ್, 180 ಎಂಎಲ್ ಮ್ಯಾಕ್ ಡವೆಲ್ ನಂ.1 ಬ್ರಾಂದಿ 9 ಟೆಟ್ರಾ ಪ್ಯಾಕ್, 90 ಎಂಎಲ್ ಬೆಂಗಳೂರು ಮಾಲ್ಟ್ ವಿಸ್ಕಿ 23 ಟೆಟ್ರಾ ಪ್ಯಾಕ್, 180 ಎಂಎಲ್ ಸವರಿನ್ ಬ್ರಾಂದಿ 6 ಟೆಟ್ರಾ ಪ್ಯಾಕ್, 180 ಎಂಎಲ್ ಓಲ್ಡ್ ಟವರಿನ್ ವಿಸ್ಕಿ 6 ಟೆಟ್ರಾ ಪ್ಯಾಕ್, 180 ಎಂಎಲ್ ಬ್ಯಾಗ್ ಪೈಪರ ವಿಸ್ಕಿ 5 ಟೆಟ್ರಾ ಪ್ಯಾಕ್, 90 ಎಂಎಲ್ ಓಲ್ಡ್ ಅಡ್ಮಿರಲ್ ಬ್ರಾಂದಿ 8 ಪ್ಲಾಸ್ಟಿಕ್ ಬ್ಯಾಗ್, 90 ಎಂಎಲ್ ರಾಜಾ ವಿಸ್ಕಿ 120 ಪೌಚುಗಳು ಇರುವುದು ಕಂಡು ಬಂದಿತ್ತು. ನಂತರ ಚಾಸಾ-1 ರವರು ದೊರೆತ ಮದ್ಯವನ್ನು ಸಂಜೆ 6.40 ರಿಂದ 7.40 ರವರೆಗೆ ಮಹಜರ್ ಕ್ರಮ ಜರುಗಿಸಿ ಮತ್ತು ಆರೋಪಿ ಬಳಿ ಮದ್ಯ ಮಾರಾಟ ಮಾಡಿ ಇದ್ದ ರೂಪಾಯಿ 8,310/- ರೂಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಮಹಜರ್ ಕಾಲಕ್ಕೆ ದೊರೆತ 11 ಮಧ್ಯದ ಬ್ರ್ಯಾಂಡ್ ಗಳಿಂದ ತಲಾ 3 ರಂತೆ ಮಾದರಿಗಾಗಿ ಸಂಗ್ರಹಿಸಿ ಒಂದು ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿ ಪಂಚರ ಸಹಿಯುಳ್ಳ ಸೀಲನ್ನು ಅಂಟಿಸಿರುತ್ತಾರೆ. ಮಾದರಿ ಸೀಲನ್ನು ತಯಾರಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನಂತರ ದೊರೆತ ಮುದ್ದೇಮಾಲು ಮತ್ತು ದಸ್ತಗಿರಿ ಮಾಡಿದ ಆರೋಪಿಯ ಜೊತೆ ಠಾಣೆಗೆ ಹಿಂತಿರುಗಿ ಚಾಸಾ1 ರವರು ದೂರನ್ನು ನೀಡಿರುತ್ತಾರೆ, ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿದಾರರು ಮಹಜರನ್ನು ನೋಡಿ ಗುರುಸಿದ್ದು ಅದನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ1 ಸಿ ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

13. ಪ್ರಾ.ಸಾ.4 ವಿನೋದ್ ರವರು ತಮ್ಮ ಪಾಟೀ ಸವಾಲಿನಲ್ಲಿ ಸದರಿ ದಿನ ನಾವು ಠಾಣೆಯನ್ನು ಬಿಟ್ಟಾಗ 6 ಗಂಟೆ 5 ನಿಮಿಷ ಆಗಿತ್ತು. ನಾವು ದಾಳಿ ಮಾಡಲು ಲಕ್ಷ್ಮೀಪುರ, ತುಳಸಿ ಗೇಟ್, ಮಾದಾಪುರ ಮಾರ್ಗವಾಗಿ ಕೃತ್ಯ ಸ್ಥಳಕ್ಕೆ ಹೋಗಿರುತ್ತೇವೆ. ಕಿಕ್ಕೇರಿಯಿಂದ ಮಾದಾಪುರಕ್ಕೆ ಹೋಗಲು 1 ಗಂಟೆ ಬೇಕಾಗುತ್ತದೆ ಎಂದರೆ ಸರಿ. ನಾವು ಠಾಣೆ ಬಿಡುವ ಕಾಲಕ್ಕೆ ಠಾಣಾ ದಿನಚರಿ ವಹಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ಸದರಿ ದಿನ ನಾನು, ಚಾಸಾ1, ಚಾಸಾ4 ಮತ್ತು ಚಾಸಾ6 ರವರು ಸ್ಥಳಕ್ಕೆ ಹೋಗಿರುತ್ತೇವೆ. ಮಾದಾಪುರ ಗ್ರಾಮದಲ್ಲಿ 2 ಸಾವಿರ ಜನಸಂಖ್ಯೆ ಇದ್ದಾರೆ ಎಂದರೆ ಸರಿ. ಮಾದರಿ ಮುದ್ದೇಮಾಲು 1 ರಿಂದ 33 ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ನಾವು ಯಾವುದೇ ಅಬಕಾರಿ ದಾಳಿ ಮಾಡಿರುವುದಿಲ್ಲ ಮತ್ತು ಮಹಜರ್ ಮಾಡಿ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿರುವುದಿಲ್ಲ, ಠಾಣಾ ಅಂಕಿ ಅಂಶಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ , ಅವರಿಗೆ ಆಗದವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೃತ್ಯಸ್ಥಳದ ಚೆಕ್ಕುಬಂದಿ ಈಗ ಹೇಳಲು ಅಗುವುದಿಲ್ಲ. ನಾನು ನನ್ನ ಮೇಲಧಿಕಾರಿಯವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮುದ್ದೇಮಾಲು 1 ರಿಂದ 33 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ ಎಂದು ನುಡಿದಿದ್ದು ಹಾಗೂ ಇನ್ನಿತರ ಸಲಹಾತ್ಮಕ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

14. ಪ್ರಾಸಾ.5 ಸಿದ್ದರಾಜು ರವರ ಸಾಕ್ಷ್ಯವನ್ನು ಅವಲೋಕಿಸಲಾಗಿ, ದಿನಾಂಕ **01.11.2016** ರಂದು ನಾನು ಠಾಣೆಯಲ್ಲಿ ಇದ್ದಾಗ ಸಂಜೆ **06.05** ಗಂಟೆ ಸಮಯದಲ್ಲಿ ನನಗೆ ಮಾದಾಪುರ ಗ್ರಾಮದಲ್ಲಿ ಸುರೇಶ್ ಬಿನ್ ನಾಗೇಗೌಡರವರು ಯಾವುದೇ ಪರವಾನಗಿ ಇಲ್ಲದೆ ಮನೆಯಲ್ಲಿ ಅಕ್ರಮವಾಗಿ ಮದ್ಯಪಾನ ದಾಸ್ತಾನು ಮಾಡಿ ಮಾರಾಟ ಮಾಡುತಿದ್ದಾರೆ ಎಂದು ಬಾತ್ಮಿ ತಿಳಿಸಿರುತ್ತಾರೆ. ನಂತರ ನಾನು ಇಲಾಖಾ ವಾಹನದಲ್ಲಿ ಹೊರಟು ಲಕ್ಷ್ಮೀಪುರ ಗೇಟಿನ ಬಳಿ ನಿಂತಿದ್ದ ಚಾಸಾ**2** ಮತ್ತು **3** ರವರಿಗೆ ಬಾತ್ಮಿ ವಿಷಯ ತಿಳಿಸಿ ದಾಳಿ ಕಾಲಕ್ಕೆ ಪಂಚರಾಗಲು ಕೋರಿಕೆ ಮೇರೆಗೆ ಒಪ್ಪಿ ನಮ್ಮೊಡನೆ ಬಂದಿರುತ್ತಾರೆ. ನಂತರ ನಾವು ಬಾತ್ಮಿ ಬಂದ ಸ್ಥಳಕ್ಕೆ ಭೇಟಿ ಕೊಟ್ಟು ನೋಡಲಾಗಿ ಆರೋಪಿ ಮನೆಯ ಮುಂದೆ ಸಾರ್ವಜನಿಕರಿಗೆ ಮದ್ಯಪಾನ ಮಾರಾಟ ಮಾಡುತ್ತಿರುವುದು ಕಂಡುಬಂದಿತ್ತು. ನಂತರ ಆರೋಪಿಯು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಸಾರ್ವಜನಿಕರು ಓಡಿಹೋಗಿ ತಪ್ಪಿಸಿಕೊಂಡಿರುತ್ತಾರೆ. ನಾವು ಸ್ಥಳದಲ್ಲಿಯೇ ದಾಳಿ ಮಾಡಿ ಆರೋಪಿಯನ್ನು ದಸ್ತಗಿರಿ ಮಾಡಿ ವಿಚಾರಿಸಲಾಗಿ ಆತನ ಹೆಸರು ಸುರೇಶ್ ಬಿನ್ ನಾಗೇಗೌಡ ಎಂದು ತಿಳಿಸಿರುತ್ತಾನೆ. ನಂತರ ವಿಚಾರಿಸಲಾಗಿ ಆತನಿಗೆ ಮದ್ಯಪಾನ ಮಾರಾಟ ಮಾಡಲು ಯಾವುದೇ ಪರವಾನಗಿ ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ನಾವು ಆರೋಪಿ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ನೋಡಲಾಗಿ ಅದರಲ್ಲಿ 500 ಎಂಎಲ್ ನ ಕಿಂಗ್ ಫಿಷರ್ ಸ್ಟ್ರಾಂಗ್ ಬಿಯರ್ 5 ಟಿನ್, 330 ಎಂಎಲ್ ನ ಕಿಂಗ್ ಫಿಷರ್ ಸ್ಟ್ರಾಂಗ್ ಬಿಯರ್ 7 ಟಿನ್, 90 ಎಂಎಲ್ ಬ್ಯಾಗ್ ಪೈಪರ ವಿಸ್ಕಿ 9 ಟೆಟ್ರಾ ಪ್ಯಾಕ್, 180 ಎಂಎಲ್ ಓಲ್ಡ್ ಅಡ್ಮಿರಲ್ ಬ್ರಾಂತಿ 14 ಟೆಟ್ರಾ ಪ್ಯಾಕ್, 180 ಎಂಎಲ್ ಮ್ಯಾಕ್ ಡವೆಲ್ ನಂ.1

ಬ್ರಾಂದಿ 9 ಟೆಟ್ರಾ ಪ್ಯಾಕ್, 90 ಎಂಎಲ್ ಬೆಂಗಳೂರು ಮಾಲ್ಟ್ ವಿಸ್ಕಿ 23 ಟೆಟ್ರಾ ಪ್ಯಾಕ್, 180 ಎಂಎಲ್ ಸವರಿನ್ ಬ್ರಾಂದಿ 6 ಟೆಟ್ರಾ ಪ್ಯಾಕ್, 180 ಎಂಎಲ್ ಓಲ್ಡ್ ಟವರಿನ್ ವಿಸ್ಕಿ 6 ಟೆಟ್ರಾ ಪ್ಯಾಕ್, 180 ಎಂಎಲ್ ಬ್ಯಾಗ್ ಪೈಪರ ವಿಸ್ಕಿ 5 ಟೆಟ್ರಾ ಪ್ಯಾಕ್, 90 ಎಂಎಲ್ ಓಲ್ಡ್ ಅಡ್ಮಿರಲ್ ಬ್ರಾಂದಿ 8 ಪ್ಲಾಸ್ಟಿಕ್ ಬ್ಯಾಗ್, 90 ಎಂಎಲ್ ರಾಜಾ ವಿಸ್ಕಿ 120 ಪೌಚುಗಳು ಇರುವುದು ಕಂಡು ಬಂದಿತ್ತು. ನಂತರ ನಾನು ದೊರೆತ ಮಧ್ಯವನ್ನು ಸಂಜೆ 6.40 ರಿಂದ 7.40 ರವರೆಗೆ ಮಹಜರ್ ಕ್ರಮ ಜರುಗಿಸಿ ಮತ್ತು ಆರೋಪಿ ಬಳಿ ಮದ್ಯ ಮಾರಾಟ ಮಾಡಿ ಇದ್ದ ರೂಪಾಯಿ 8,310/- ರೂಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರ್ ಕಾಲಕ್ಕೆ ದೊರೆತ 11 ಮಧ್ಯದ ಬ್ರ್ಯಾಂಡ್ ಗಳಿಂದ ತಲಾ 3 ರಂತೆ ಮಾದರಿಗಾಗಿ ಸಂಗ್ರಹಿಸಿ ಒಂದು ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿ ಪಂಚರ ಸಹಿಯುಳ್ಳ ಸೀಲನ್ನು ಅಂಟಿಸಿರುತ್ತೇನೆ. ಮಾದರಿ ಸೀಲನ್ನು ತಯಾರಿಸಿರುತ್ತೇನೆ. ನಂತರ ದೊರೆತ ಮುದ್ದೇಮಾಲು ಮತ್ತು ದಸ್ತಗಿರಿ ಮಾಡಿದ ಆರೋಪಿಯ ಜೊತೆ ಠಾಣೆಗೆ ಹಿಂತಿರುಗಿ ನಾನು ದೂರನ್ನು ನೀಡಿರುತ್ತೇನೆ, ಚಾಸಾ9 ರವರು ಠಾಣಾ ಗುನ್ನಾ ಸಂಖ್ಯೆ 247/2016 ರಂತೆ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ. ನಂತರ ದಿನಾಂಕ 10.06.2017 ರಂದು ಚಾಸಾ9 ರವರಿಗೆ ಮುಂದಿನ ತನಿಖೆಯನ್ನು ವಹಿಸಿಕೊಂಡು, ಕಡತವನ್ನು ಪರಿಶೀಲಿಸಿ ಮೇಲ್ನೋಟಕ್ಕೆ ಅಪರಾಧ ಕಂಡು ಬಂದ ಕಾರಣ ಆರೋಪಿ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ. ಸಾಕ್ಷಿದಾರರು ಮಹಜರನ್ನು ನೋಡಿ ಗುರುಸಿದ್ದು ಅದನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ1ಬಿ ಎಂದು

ಗುರುತಿಸಲಾಯಿತು. ದೂರನ್ನು ನಿಪಿ 4 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ4 ಬಿ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಮುದ್ದೇಮಾಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೇಮಾಲು 1 ರಿಂದ 33 ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

15. ಪ್ರಾಸಾ.5 ಸಿದ್ದರಾಜು ರವರು ತಮ್ಮ ಪಾಟೀಸವಾಲಿನಲ್ಲಿ ನಾವು ಠಾಣೆಯನ್ನು ಬಿಟ್ಟಾಗ ಸಂಜೆ 6 ಗಂಟೆಯಾಗಿತ್ತು. ನಾವು ಠಾಣೆಗೆ ವಾಪಾಸ್ ಬಂದಾಗ ರಾತ್ರಿ 8 ಗಂಟೆ ಆಗಿತ್ತು. ಕಿಕ್ಕೇರಿಯಿಂದ ಮಾದಾಪುರ ಗ್ರಾಮ ಎಷ್ಟು ಕಿ.ಮೀ. ದೂರ ಇದೆ ಎಂದು ಈಗ ಹೇಳಲು ಆಗುವುದಿಲ್ಲ. ಸದರಿ ದಿನ ಆರೋಪಿಯು ಯಾವ ದಿಕ್ಕಿಗೆ ಓಡಿಹೋದ ಎಂದು ಈಗ ಹೇಳಲು ಆಗುವುದಿಲ್ಲ. ಮಹಜರ್ ಕಾಲಕ್ಕೆ ಎಷ್ಟು ಜನ ಸೇರಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ಮಾದರಿ ಮುದ್ದೇಮಾಲು 1 ರಿಂದ 33 ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ನಾನು ಪಂಚರಿಗೆ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿ. ನಾನು ಇಲಾಖೆಯ ಅಂಕಿಅಂಶಕ್ಕಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮಾದರಿ ಮುದ್ದೇಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪರಾಧ ಮಾಡದೇ ಇದ್ದರೂ ಅವರ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿ

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿದ್ದು ಹಾಗೂ ಇನ್ನಿತರ ಸಲಹಾತ್ಮಕ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

16. ಪ್ರಾ.ಸಾ.3 ಸಿದ್ದೇಗೌಡ ಹೆಚ್.ಎಸ್, ಪ್ರಾ.ಸಾ.4 ಚಂದ್ರೇಗೌಡ ಮತ್ತು ಪ್ರಾ.ಸಾ.5 ಸಿದ್ದರಾಜು ರವರು ಇಲಾಖಾ ಸಾಕ್ಷಿದಾರರಾಗಿರುವ ಕಾರಣ ಅಭಿಯೋಜನೆಯು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯುವುದು ಸರ್ವೆ ಸಾಮಾನ್ಯವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ.3 ಸಿದ್ದೇಗೌಡ ಹೆಚ್.ಎಸ್, ಪ್ರಾ.ಸಾ.4 ಚಂದ್ರೇಗೌಡ ಮತ್ತು ಪ್ರಾ.ಸಾ.5 ಸಿದ್ದರಾಜು ರವರು ಅಭಿಯೋಜನೆಯು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿದ್ದರೂ ಸಹ ಸದರಿ ಸಾಕ್ಷಿದಾರರು ಇಲಾಖಾ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿದಾರರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ ಸಾಕ್ಷಿದಾರರು ಯಾರು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಪ್ರಾ.ಸಾ.3 ಸಿದ್ದೇಗೌಡ ಹೆಚ್.ಎಸ್, ಪ್ರಾ.ಸಾ.4 ಚಂದ್ರೇಗೌಡ ಮತ್ತು ಪ್ರಾ.ಸಾ.5 ಸಿದ್ದರಾಜು ರವರ ಸಾಕ್ಷ್ಯವು ವಿರೋಧಾಬಾಸದಿಂದ ಕೂಡಿರುತ್ತದೆ. ಕೇವಲ ಪ್ರಾ.ಸಾ.3 ಸಿದ್ದೇಗೌಡ ಹೆಚ್.ಎಸ್, ಪ್ರಾ.ಸಾ.4 ಚಂದ್ರೇಗೌಡ ಮತ್ತು ಪ್ರಾ.ಸಾ.5 ಸಿದ್ದರಾಜು ರವರು ನುಡಿದ ಸಾಕ್ಷ್ಯದಿಂದ ಹಾಗೂ ನಿಶಾನೆಗಳಾಗಿ ಗುರುತಿಸಲ್ಪಟ್ಟಿರುವ ದಾಖಲಾತಿಗಳ ಸಾಕ್ಷ್ಯದಿಂದ ಹಾಗೂ ಮುದ್ದೆ ಮಾಲಿನ ಆಧಾರದಿಂದ ಆರೋಪಿಯು ಮೇಲ್ಕಂಡ ಕಲಂ. ಗಳನುಸಾರ ಅಪರಾಧಗಳನ್ನು

ಎಸಗಿರುತ್ತಾರೆ ಎಂಬ ಖಚಿತವಾದ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

**17.** ಅಲ್ಲದೆ ಮದ್ಯದ ಬಾಟಲಿಗಳಿಂದ ಮಾದರಿಗಾಗಿ ದ್ರಾವಣವನ್ನು ರಾಸಾಯನಿಕ ವಿಶ್ಲೇಷಣೆಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರ ಹಾಗೂ ನೀಡಲ್ಪಟ್ಟಿರುವ ಮಾರ್ಗದರ್ಶಿ ಸೂತ್ರಗಳನುಸಾರ ನಿರ್ವಹಿಸಿರುವುದಿಲ್ಲ. ಮಾದರಿ ವಸ್ತುಗಳು ಹಾಗೂ ವಶಪಡಿಸಿಕೊಂಡ ವಸ್ತುಗಳು ಆರೋಪಿಯು ಅಕ್ರಮ ಸ್ವಾಧೀನದಲ್ಲಿದ್ದ ಬಗ್ಗೆ ಸೂಕ್ತ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

**18.** ಕರ್ನಾಟಕ ಅಬಕಾರಿ ಕಾಯ್ದೆ 32 ಮತ್ತು 34 ರಡಿ ಅಪಾದನೆ ಸಾಭೀತುಗೊಳ್ಳಬೇಕಾದರೆ ಅಭೆಯೋಜನೆಯವರು ಆರೋಪಿ ಮದ್ಯ ದಾಸ್ತಾನು ಹೊಂದಿದ್ದ ಮುಖ್ಯ ಸಂಗತಿಯನ್ನು ಸಾಭೀತು ಪಡಿಸಬೇಕಾಗುತ್ತದೆ. ಸದರಿ ಸಂಗತಿ ಸಾಭೀತುಗೊಂಡಲ್ಲಿ ಕಲಂ.40 ಅಬಕಾರಿ ಕಾಯ್ದೆಯಡಿ ಪೂರ್ವ ಭಾವನೆ ಹೊಂದಬಹುದಾಗಿದೆ. ಕಾರಣ ಅಭಿಯೋಜನೆಯವರು ಆರೋಪಿಯ ಹತ್ತಿರ ಮದ್ಯ ದಾಸ್ತಾನು ಇತ್ತು ಎಂಬುದನ್ನು ಯಾವುದೇ ಸಂಶಯಗಳಿಗೆ ಎಡೆ ಇಲ್ಲದಂತೆ ಸಾಭೀತು ಮಾಡಬೇಕಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಮೇಲ್ಕಂಡ ಮೌಖಿಕ ಸಾಕ್ಷ್ಯ ಹಾಗೂ ಅಭಿಯೋಜನೆಯ ಪರವಾಗಿ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಅಭಿಯೋಜನೆಯು ಆರೋಪಿಯು ಕೃತ್ಯದಲ್ಲಿ ತೊಡಗಿದ

ಬಗ್ಗೆ ಅಕ್ರಮವಾಗಿ ಯಾವುದೇ ಅನುಮತಿ ಇಲ್ಲದೇ ಆರೋಪಿಯು ಅವರ ಮನೆಯ ಪಕ್ಕದಲ್ಲಿ ಅಕ್ರಮವಾಗಿ ಇಟ್ಟಿದ್ದ ಸುಮಾರು 8,453/- ಬೆಲೆ ಬಾಳುವ 26.410 ಎಂ.ಎಲ್ ನಷ್ಟು ಭಾರತೀಯ ತಯಾರಿಕಾ ಮದ್ಯವನ್ನು ಅಕ್ರಮವಾಗಿ ಹೊಂದಿದ್ದ ಎನ್ನುವ ಬಗ್ಗೆ ವಶಪಡಿಸಿಕೊಂಡ ಬಗ್ಗೆ ರುಜುವಾತು ಪಡಿಸಿರುವುದಿಲ್ಲ. ಆ ಕಾರಣದಿಂದ ಅಭಿಯೋಜನೆಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.40 ರ ಅನುಸಾರ ಸಹ ಪೂರ್ವಭಾವನೆಯ ಲಾಭವನ್ನು ಪಡೆಯಲು ಸಹ ಭಾಜನವಾಗಿರುವುದಿಲ್ಲ.

19. ಇಂತಹ ಸಂದರ್ಭದಲ್ಲಿ ಆರೋಪಿಯು ಆರಕ್ಷಕ ಉಪನಿರೀಕ್ಷಕರು, ದಿನಾಂಕಃ **01.11.2016** ರಂದು ಸಂಜೆ 6.30 ಗಂಟೆ ಸಮಯದಲ್ಲಿ ಕಿಕ್ಕೇರಿ ಠಾಣಾ ಸರಹದ್ದಿಗೆ ಸೇರಿದ ಮಾದಪುರ ಗ್ರಾಮದಲ್ಲಿ ಪ್ರಾ.ಸಾ.3 ಸಿದ್ದೇಗೌಡ ಹೆಚ್.ಎಸ್, ಪ್ರಾ.ಸಾ.4 ಚಂದ್ರೇಗೌಡ ಮತ್ತು ಪ್ರಾ.ಸಾ.5 ಸಿದ್ದರಾಜು ರವರು ಆರೋಪಿಯ ಮನೆಯ ಪಕ್ಕದಲ್ಲಿ ದಾಳಿ ಮಾಡಿದಾಗ ಆರೋಪಿಯು ತಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಒಟ್ಟು ಸುಮಾರು 8,453/- ಬೆಲೆ ಬಾಳುವ 26.410 ಎಂ.ಎಲ್ ನಷ್ಟು ಮದ್ಯವನ್ನು ಅಕ್ರಮವಾಗಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಎಂಬ ತೀರ್ಮಾನಕ್ಕೆ ಸಮಂಜಸವಾಗಿರುವುದಿಲ್ಲ. ಸಾಕಷ್ಟು ಸಾಕ್ಷ್ಯದ ಕೊರತೆಯು ಸಹ ಇದಕ್ಕೆ ಕಾರಣವಾಗಿರುತ್ತದೆ. ಆದಕಾರಣ ಅಭಿಯೋಜನೆಯು ಆರೋಪಿಯ ವಿರುದ್ದ ಹೊರಿಸಿರುವ ಆಪಾದನೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು

ವಿಫಲವಾಗಿರುತ್ತದೆ. ಆದಕಾರಣ ಆರೋಪಿಯ ವಿರುದ್ದ ಅಪರಾಧಿಕ ಭಾದ್ಯತೆಯನ್ನು ಹೊರಿಸಿ ಅವರ ವೈಯಕ್ತಿಕ ಸ್ವಾತಂತ್ರ್ಯ ಹರಣ ಮಾಡುವುದು ಸಹ ಸ್ಥಾಪಿತ ತತ್ವಗಳನುಸಾರ ಈ ಪ್ರಕರಣದ ಸಂಗತಿಗಳು ಹಾಗೂ ಸಂದರ್ಭಗಳನುಸಾರ ಸಾಧುವಾಗಿರುವುದಿಲ್ಲ. ಈ ಮೇಲ್ಕಂಡ ಎಲ್ಲಾ ಚರ್ಚಿತ ಸಂಗತಿಗಳು ಹಾಗೂ ಸಂದರ್ಭಗಳನುಸಾರ ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳು.1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.

**20. <u>ಅಂಶ 2 ಃ-</u>** ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರಗಳ ಅನುಸಾರ ಹಾಗೂ ಚರ್ಚಿಸಿದ ಸಂಗತಿಗಳ ಅನುಸಾರ, ಈ ಕೆಳಕಂಡಂತೆ ಈ ನ್ಯಾಯಾಲಯವು ಆದೇಶಿಸುತ್ತದೆ.

**<u>ಃ ಆದೇಶ ಃ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)** ರಡಿಯಲ್ಲಿ ದತ್ತಕವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ. **32** ಮತ್ತು **34** ರಡಿಯಲ್ಲಿನ ಆರೋಪಗಳಿಂದ ದೋಷ ಮುಕ್ತಗೊಳಿಸಿ ನಿರ್ದೋಷಿಯೆಂದು ತೀರ್ಮಾನಿಸಿ ಖುಲಾಸೆಗೊಳಿಸುತ್ತಿದ್ದೇನೆ.

ಆರೋಪಿಯು ಈ ಹಿಂದೆ ಪ್ರಕರಣದ ಪ್ರಾಥಮಿಕ ಹಂತದಲ್ಲಿ ಜಾಮೀನು ಪಡೆಯುವ ಸಂದರ್ಭದಲ್ಲಿ

ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ವೈಯಕ್ತಿಕ ಮುಚ್ಚಳಿಕೆ ಪತ್ರಗಳು ಹಾಗೂ ಆರೋಪಿಯ ಪರವಾಗಿ ಜಾಮೀನುದಾರರು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರಗಳನ್ನು ಈ ಮೂಲಕ ರದ್ದು ಪಡಿಸಲಾಗಿರುತ್ತದೆಂದು ಆದೇಶಿಸಲಾಗಿರುತ್ತದೆ.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮು.ಮಾ.1 ರಿಂದ **33** ಮಾದರಿ ಪೌಚುಗಳು ಬೆಲೆ ಬಾಳದ ವಸ್ತುವಾಗಿರುವ ಕಾರಣ ಮೇಲ್ಮನವಿ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಈ ಮೂಲಕ ಆದೇಶಿಸುತ್ತಿದ್ದೇನೆ.

**(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಅದನ್ನು ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕ 5ನೇ ಮೇ 2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು).**

**(ಸುಧೀರ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕೆ.ಆರ್.ಪೇಟೆ.**

## **: ಅನುಸೂಚಿ :**

1. **ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-**

| | | |
|---|---|---|
| **ಪ್ರಾ.ಸಾ.1** | : | ಮಂಜೇಗೌಡ |
| **ಪ್ರಾ.ಸಾ.2** | : | ಚಂದ್ರೇಗೌಡ |
| **ಪ್ರಾ.ಸಾ.3** | : | ಸಿದ್ದೇಗೌಡ.ಹಚ್.ಎಸ್ |
| **ಪ್ರಾ.ಸಾ.4** | : | ವಿನೋದ್ |
| **ಪ್ರಾ.ಸಾ.5** | : | ಸಿದ್ದರಾಜು |

2. **ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳು:-**

| | | |
|---|---|---|
| **ನಿ.ಪಿ.1** | : | ಪಂಚನಾಮೆ |

| | | |
|---|---|---|
| ನಿ.ಪಿ.1(ಎ ರಿಂದ ಸಿ) | ಃ | ಸಾಕ್ಷಿದಾರರ ಸಹಿ |
| ನಿ.ಪಿ.2 | ಃ | ಚಾಸಾ.2 ರವರ ಅಲ್ಲೆಗಳೆದ ಹೇಳಿಕೆ |
| ನಿ.ಪಿ.3 | ಃ | ಚಾಸಾ.3 ರವರ ಅಲ್ಲೆಗಳೆದ ಹೇಳಿಕೆ |
| ನಿ.ಪಿ.4 | ಃ | ಸ್ವ ದೂರು |
| ನಿ.ಪಿ.4(ಎ ಮತ್ತು ಬಿ ) | ಃ | ಸಾಕ್ಷಿದಾರರ ಸಹಿ |
| ನಿ.ಪಿ.5 | ಃ | ಪ್ರಥಮ ವರ್ತಮಾನ ವರದಿ |
| ನಿ.ಪಿ.5(ಎ) | ಃ | ಸಾಕ್ಷಿದಾರರ ಸಹಿ |
| ನಿ.ಪಿ.6 | ಃ | ಎಫ್.ಎಸ್.ಎಲ್ ವರದಿ |
| ನಿ.ಪಿ.6(ಎ) | ಃ | ಸಾಕ್ಷಿದಾರರ ಸಹಿ |

**3. ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳು:-**

ಮು.ಮಾ.1 ರಿಂದ 33 ಃ ಮಾದರಿ ಮುದ್ದೇಮಾಲುಗಳು

**4. ಆರೋಪಿಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ದಾಖಲೆಗಳು:- ಇಲ್ಲ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕೆ.ಆರ್.ಪೇಟೆ.**